(SMT. RATNAMMA MADHAVA RAO)

(*b*) if so, when it was recognised ;

(*c*) if not, the reasons for not recognising ?

A.—Sri K. NAGAPPA ALVA (Minister for Health).—

(*a*) Yes.

(*b*) M. B. B. S. Degree granted after 31st December 1932 is recognised by the Medical Council of India.

(*c*) Does not arise.

ಶ್ರೀಮತಿ ರತ್ನಮ್ಮ ಮಾಧವರಾವ್.—ಮೈಸೂರು ವಿಶ್ವವಿದ್ಯಾನಿಲಯದ ಎಂ.ಬಿ.ಬಿ.ಎಸ್. ಪದವಿಗೆ ಅಖಿಲ ಭಾರತ ವೈದ್ಯಕೀಯ ಪರಿಷತ್ತಿನವರು ಮಾನ್ಯತೆಯನ್ನು ಕೊಟ್ಟಿದ್ದಾರೆಯೇ ಎಂದು ಕೇಳಿದ್ದಕ್ಕೆ ಮಾನ್ಯತೆಯನ್ನು ಕೊಟ್ಟಿದ್ದಾರೆಂದು ಸೇಳಿದ್ದೀರಿ, ಹಾಗಾದರೆ 1932 ನೇ ಇಸವಿಗಿಂತ ಮೊದಲು ಇಲ್ಲಿ ಎಂ.ಬಿ.ಬಿ.ಎಸ್. ಪರೀಕ್ಷೆಯನ್ನು ಪಾಸು ಮಾಡಿದವರಿಗೆ ಮಾನ್ಯತೆ ಇಲ್ಲವೆ ?

ಶ್ರೀ ಕೆ. ನಾಗಪ್ಪ ಆಳ್ವ.—1932 ನೇ ಇಸವಿಗಿಂತ ಮೊದಲು ಇಲ್ಲಿ ಯಾರೂ ಎಂ.ಬಿ.ಬಿ.ಎಸ್. ಪರೀಕ್ಷೆಯನ್ನು ಪಾಸು ಮಾಡಿಲ್ಲ.

ಶ್ರೀಮತಿ. ರತ್ನಮ್ಮ ಮಾಧವರಾವ್.—ಇದು ನಿಜವೇ ?

ಶ್ರೀ ಕೆ. ನಾಗಪ್ಪ ಆಳ್ವ.—ನಾನು ಯಾವಾಗಲೂ ಇಲ್ಲ ನಿಜವನ್ನೇ ಹೇಳುವುದು.

ಶ್ರೀಮತಿ. ರತ್ನಮ್ಮ ಮಾಧವರಾವ್.—1932ನೇ ಇಸವಿಗಿಂತ ಮೊದಲು ಮೆಡಿಕಲ್ ಕಾಲೇಜು ನಮ್ಮ ರಾಜ್ಯದಲ್ಲಿ ಇರಲಿಲ್ಲವೇ, ಆಗ ಇಲ್ಲಿ ಪರೀಕ್ಷೆಗಳು ನಡೆಯಲಿಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಮೆಡಿಕಲ್ ಕಾಲೇಜು ಇತ್ತು. ಆದರೆ ಎಂ.ಬಿ.ಬಿ.ಎಸ್. ಪರೀಕ್ಷೆಯ ಕೊನೆಯ ವರ್ಷ ಇಲ್ಲಿ ಪ್ರಾರಂಭವಾದದ್ದು 1932ನೇ ಇಸವಿಯಲ್ಲಿ. For the first time in 1932, they were given their degree.

Development of the West Coast National Highway.

**Q.*—118. Sri R. S. HEGDE (Honnavar).—

Will the Government be pleased to state :—

(*a*) the stage at which development of the West Coast National Highway stands at present ;

(*b*) the length of the said Highway in the North Kanara District ;

(*c*) the reasons for the delay in the construction of this Road as per Schedule in the N. K. District ;

(*d*) when the bridge on Sharavathi a part of the West Coast Road would be completed ?

A.—Sri G. B. SHANKAR RAO (Parliamentary Secretary to the Minister for Public Works).—

(*a*) *Vide* statement appended.

(*b*) 88 Miles.

(c) The construction of this road is being done as per the schedule. Only in a few cases difficulties are being experienced due to non-availability of land in certain places.

(d) The bridge is expected to be completed by March 1967.

STATEMENT

Showing the West Coast Road in Mysore State—Physical Progress

Sl. No.	Item	South Kanara District		N.K. Divn.	Remarks
		Spl. West Coast Dn., Mangalore	Spl. West Coast Dn., Coondapur	Spl. West Coast Dn., Kumta	
1	Formation	80%	85%	78%	
2	Waterbound macadam	70%	78%	63%	
3	Black topping	53%	51%	40%	
4	C. D. Works	77%	92%	78%	
5	Number of byepasses				
	i) Proposed	9	2	3	
	ii) Completed	3	—	—	
	iii) Under progress	6	2	3	
6	Number of bridges				
	i) Proposed	9	6	14	
	ii) Completed	7	5	10	
	iii) Under progress	2	1	4	
Overall Progress 68 per cent					

Sri R. S. HEGDE.—Supplementary to (c): How do Government propose to solve the difficulties experienced in those few cases ?

†Sri G. B. SHANKAR RAO.—In a few sections of the road, due to non-availability of land, formation of road could not be completed. The Land Acquisition Officer has been asked to expedite the land acquisition proceedings.

ಶ್ರೀ ಎಸ್. ಪಿ. ಘಾಯದೆ.—ಪಶ್ಚಿಮ ಕರಾವಳಿಯಲ್ಲಿ ರಸ್ತೆಯನ್ನು ಮಾಡುವುದಕ್ಕಾಗಿ ಜಮೀನನ್ನು ಅಕ್ವೈರ್ ಮಾಡಿಕೊಂಡು ಅದರ ಮಾಲೀಕರಿಗೆ ಹಣವನ್ನು ಕೊಡದೆ ಪ್ರತಿವರ್ಷ ಬಡ್ಜೆಟ್ಟಿನಲ್ಲಿ ಅದಕ್ಕಾಗಿ ಒದಗಿಸಿದಂತಹ 3 ಲಕ್ಷ ರೂಪಾಯಿಗಳನ್ನು ಸರೆಂಡರ್ ಮಾಡುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri VEERENDRA PATIL.—We keep the amount at the disposal of the Land Acquisition Officer. He has to complete certain formalities and procedure. After completing them, he will pass award and we will pay the amount.

Sri R. S. HEGDE.—Since how many years these proceedings have been pending ?

Sri G. B. SHANKAR RAO.—Those details are not with me.

Sri R. S. HEGDE.—Has it come to the notice of the Government that the bridge work on the Sharavathi Project has been slowed down recently ?

Sri G. B. SHANKAR RAO.—It has not been slowed down. The Contractor has been asked to go ahead with the work.

Shifting of Sangama Village

*Q.—139. **Sri MAHANTHASWAMY** (Shahapur).—

Will the Government be pleased to state :—

(*a*) whether the Sangameswara Temple would not be submerged if the Krishna Project site is changed from Narayanapura to Siddapura ;

(*b*) the distance from Siddapura site to the temple ;

(*c*) whether it would be necessary to shift the Sangama Village which is near that temple ?

A.—**Sri M. V. KRISHNAPPA** (Minister for Revenue).—

(*a*) No.

(*b*) 20 miles upstream.

(*c*) Yes.

ಶ್ರೀ ಮಹಂತಸ್ವಾಮಿ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಸಂಗಮೇಶ್ವರ ದೇವಸ್ಥಾನವು ಮುಳುಗಡೆಯಾಗುವುದಿಲ್ಲ ಎಂದು ಹೇಳಿದ್ದೀರಿ, ಆದರೆ ನದಿ ದೇವಸ್ಥಾನದ ಸಮೀಪದಲ್ಲಿರುವ ಸಂಗಮ ಗ್ರಾಮವನ್ನು ಸ್ಥಳಾಂತರಿಸಬೇಕಾಗುವುದೇ, ಎಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದೀರಿ ಆದ್ದರಿಂದ ಕೃಷ್ಣಾ ಯೋಜನೆಯು ಅಪ್‌ಸ್ಟ್ರೀಮಿನಿಂದ ಸಂಗಮ ಗ್ರಾಮಕ್ಕೆ ಎರಡು ಫರ್ಲಾಂಗ್ ದೂರ ಇರುವುದರಿಂದ ಮುಂದೆ ಈ ಯೋಜನೆಯಿಂದ ಸಂಗಮೇಶ್ವರ ದೇವಸ್ಥಾನಕ್ಕೆ ಅಫೆಕ್ಟ್ ಆಗುವುದಿಲ್ಲವೇ ?

† ಶ್ರೀ ಎಂ. ವಿ. ಕೃಷ್ಣಪ್ಪ.—ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ಮೊದಲನೇ ಸ್ಟ್ರೇಜಿನಲ್ಲಿ ನೀರಿನ ಲೆವೆಲ್ 1607 ಅಡಿ ಎತ್ತರಕ್ಕೆ ಬರುತ್ತದೆ. ಆದರೆ ದೇವಸ್ಥಾನದ ಎತ್ತರ 1617 ಅಡಿ ಇದೆ. ಅಂದರೆ ನೀರಿನ ಮಟ್ಟಕ್ಕಿಂತ 10 ಅಡಿ ಹೆಚ್ಚು ಇದೆ. ಈ ಯೋಜನೆಯು ಫೈನಲ್ ಸ್ಟ್ರೇಜಿಗೆ ಬಂದಾಗ ನೀರು ಸ್ವಲ್ಪ ಹೆಚ್ಚು ಕಡಿಮೆ ದೇವಸ್ಥಾನದಲ್ಲಿ ದೇವರ ಪೀಠದ ಮಟ್ಟಕ್ಕೆ ಬರುತ್ತದೆ. ಆಗ ಅದರ ಬದಲಾವಣೆಯ ಯೋಚನೆ ಬರುತ್ತದೆ. ಆದ್ದರಿಂದ ಈಗ ಈ ಯೋಜನೆಯ ಮೊದಲನೆಯ ಸ್ಟ್ರೇಜಿನಲ್ಲಿ ಮುಳುಗಡೆಯ ಪ್ರಶ್ನೆ ಬರುವುದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಕೃಪ್ಪಾ ಮೇಲ್ಕಂಡೆ ಯೋಜನೆಯು ನಾರಾಯಣಪುರದ ಕಟ್ಟೆನಿವೇಶನವನ್ನು ಸಿದ್ದಾಪುರಕ್ಕೆ ಬದಲಾಯಿಸುವುದರಿಂದ ಈ ಯೋಜನೆಯ ಎರಡನೆಯ ಸ್ಟ್ರೇಜು, 3ನೇ ಸ್ಟ್ರೇಜು ಮುಗಿಯುವ ವೇಳೆಗೆ ಸಂಗಮೇಶ್ವರ ದೇವಸ್ಥಾನವು ಮುಳುಗಡೆ ಆಗುತ್ತದೆ, ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ನದ್ಯಕ್ಕೆ ದೇವಸ್ಥಾನ ಮುಳುಗಡೆ ಆಗುವುದಿಲ್ಲ. ಈಗಾಗಲೇ ಅದರ ಪ್ರೊಟೆಕ್ಟೀವ್ ಕೆಲಸಕ್ಕೋಸ್ಕರ 7 ಲಕ್ಷ ರೂಪಾಯಿಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಒದಗಿಸಿದ್ದಾರೆ. ಮುಂದೆ ಈ ಯೋಜನೆಯ ಕೆಲಸ ಫೈನಲ್ ಸ್ಟ್ರೇಜಿಗೆ ಬಂದಾಗ ನೀರು ದೇವರ